


ಚರ್ಚೆಗೆ ಒಳಗಾಗಿಲ್ಲ. ನಮ್ಮ ಈ ಸರಣಿ ಅಂಥ ಭಿನ್ನ ಆಯಾಮಗಳನ್ನೂ ಒಳಗೊಂಡಿದೆ. ಸಂಸತ್ತಿನಲ್ಲಿ ಅವರು ನಡೆಸಿದ ಚರ್ಚೆ, ಬರೆದ ಪತ್ರಗಳು, ಪತ್ರಿಕಾ ಲೇಖನಗಳು – ಹೀಗೆ ವೈವಿಧ್ಯದ ವಿಷಯಗಳನ್ನು ಒಳಗೊಂಡಿದ್ದೇವೆ' ಎನ್ನುವ ಅರುಣ್, ಈ ಸರಣಿ ಓದು ವರ್ತಮಾನಕ್ಕೆ ಸ್ಪಂದಿಸುವ ಹಾಗೆ ಎಚ್ಚರ ವಹಿಸಿದ್ದಾರೆ.

'ಅಂಬೇಡ್ಕರ್ ಆಗಿನ ಕಾಲಕ್ಕೆ ಆಡಿದ ಎಷ್ಟೋ ಮಾತುಗಳು, ತಕ್ಷಣದ ಪ್ರತಿಕ್ರಿಯೆಗಳು ಇಂದಿಗೆ ಅಷ್ಟು ಪ್ರಸ್ತುತ ಅಲ್ಲ. ಅಂಥ ವಿಷಯಗಳನ್ನು ಹೆಚ್ಚಾಗಿ ಒಳಗೊಂಡಿಲ್ಲ. ಅನಗತ್ಯ ವಿವಾದ ಸೃಷ್ಟಿಸುವಂಥ ಬರಹಗಳನ್ನೂ ಒಳಗೊಂಡಿಲ್ಲ. ಆದರೆ ಅವರ ವೈಚಾರಿಕತೆಯ ಎಲ್ಲ ಆಯಾಮಗಳನ್ನೂ ಕಾಣಿಸುವಂಥ ಬರಹಗಳನ್ನು ಒಳಗೊಳ್ಳುವಂತೆ ಎಚ್ಚರ ವಹಿಸಿದ್ದೇವೆ' ಎನ್ನುತ್ತಾರೆ ಅವರು.

ಈಗ ಅಂಬೇಡ್ಕರ್ ಓದಿನ ಸರಣಿ 500 ಎಪಿಸೋಡ್‌ಗಳ ಹೊಸ್ತಿಲಲ್ಲಿದೆ. ಇಲ್ಲಿ ಓದಿರುವವರಲ್ಲಿ ಮಹಿಳೆಯರೇ ಹೆಚ್ಚು ಎನ್ನುವುದು ಇನ್ನೊಂದು ವಿಶೇಷ. ಕರ್ನಾಟಕದ ಎಲ್ಲ ಭಾಗಗಳ, ಸಮಾಜದ ಎಲ್ಲ ವರ್ಗಗಳ ಜನರೂ ಇದರಲ್ಲಿದ್ದಾರೆ. 'ಅಂಬೇಡ್ಕರ್ ಎಲ್ಲ ಜನರಿಗೂ ಸೇರಿದವರು, ಎಲ್ಲ ಜನರಿಗೂ ಬೇಕಾದವರು ಎಂಬುದನ್ನು ನಮ್ಮ ಈ ಸರಣಿ ಹೇಳುತ್ತದೆ' ಎನ್ನುವುದು ಅರುಣ್ ಮಾತು.

'ಈಗೀಗ ಜನರೇ ಆಸಕ್ತಿವಹಿಸಿ ಈ ಓದಿನ ಸರಣಿಯಲ್ಲಿ ಭಾಗವಹಿಸಲು ಮುಂದೆ ಬರುತ್ತಿದ್ದಾರೆ. ಇಲ್ಲಿಯವರೆಗೆ 330ಕ್ಕೂ ಅಧಿಕ ಜನರು ಈ ಸರಣಿಯಲ್ಲಿ ಓದಿದ್ದಾರೆ. ಸಾಹಿತಿಗಳು, ರೈತರು, ಪತ್ರಕರ್ತರು, ಕಲಾವಿದರು, ಸಂಗೀತಗಾರರು ಎಲ್ಲರೂ ಓದಿದ್ದಾರೆ. ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಇದೇ ಮೊದಲ ಬಾರಿಗೆ ಅಂಬೇಡ್ಕರ್ ಅವರ ಬರಹ ಓದಿದವರು. ಈ ಕಾರಣಕ್ಕಾಗಿಯೇ ಈ ಸರಣಿ ಯಶಸ್ವಿಯಾಗಿದೆ ಎಂದು ನನಗನಿಸಿದೆ' ಎಂದು ಅರುಣ್ ತಮ್ಮ ಶ್ರಮ ಸಾರ್ಥಕವಾದ ಕುರಿತು ಹೇಳುತ್ತಾರೆ.

ಈ ಸರಣಿಯ 200ನೇ ಎಪಿಸೋಡ್ ಅನ್ನು ಖ್ಯಾತ ಸಂಗೀತ ಸಂಯೋಜಕ, ಗೀತರಚನೆಕಾರ ಹಂಸಲೇಖ ಓದಿದ್ದಾರೆ. 300ನೇ ಎಪಿಸೋಡ್ ಅನ್ನು ನಟ ರಮೇಶ್ ಅರವಿಂದ್ ಓದಿದ್ದಾರೆ. ದೇವನೂರ ಮಹಾದೇವ, ರಂಗಾಯಣ ರಘು, ಮಂಗಳಾ, ಅಚ್ಯುತ್ ಕುಮಾರ್, ಮೋಟಮ್ಮ ಸೇರಿದಂತೆ ಹಲವು ಗಣ್ಯರೂ ಈ ಸರಣಿಯ ಭಾಗವಾಗಿದ್ದಾರೆ.

ಮುಂದಿನ ದಿನಗಳಲ್ಲಿ ಅಂಬೇಡ್ಕರ್ ವಿಚಾರಧಾರೆಯ ಕುರಿತು ಸಾಕಷ್ಟು ತಿಳಿದುಕೊಂಡಿರುವವರಿಂದ ವಿಶ್ಲೇಷಣಾರೂಪದ ಓದಿನ ಸರಣಿ ಮಾಡುವ ಆಲೋಚನೆಯೂ ಅರುಣ್ ಅವರಿಗಿದೆ. ಬಾಬಾ ಸಾಹೇಬರು ಹೇಳಿದ ಎಷ್ಟೋ ವಿಷಯಗಳು ಒಂದು ಓದಿಗೆ ನಿಲುಕದಷ್ಟು ಸಂಕೀರ್ಣವಾಗಿದೆ. ಹಾಗಾಗಿ ಅಂಥವುಗಳನ್ನು ವಿಶ್ಲೇಷಣೆಯ ಮೂಲಕ ಜನರಿಗೆ ತಲುಪಿಸುವ ಉದ್ದೇಶ ಅವರದ್ದು.

'ನಾನು ಈ ಓದಿನ ಸರಣಿಗೆ ದಿನದ ಮೂರು ಗಂಟೆಗಳನ್ನು ತೆಗೆದಿರಿಸಿದ್ದೇನೆ. ಅಷ್ಟು ಬಿಟ್ಟರೆ ಈ ಸರಣಿ ಸಹಭಾಗಿತ್ವದಿಂದ ರೂಪುಗೊಂಡು ಬೆಳೆದಿದ್ದು. ಹಾಗಾಗಿ ಇದರ ಯಶಸ್ಸೂ ಸಹಭಾಗಿತ್ವದ ಯಶಸ್ಸೇ ಆಗಿದೆ' ಎನ್ನುವ ಅರುಣ್ ಅವರಿಗೆ, ಇನ್ನೂ ನೂರು ಎಪಿಸೋಡ್‌ಗಳವರೆಗೆ ವಿಸ್ತರಿಸಿ, ಅಂಬೇಡ್ಕರ್ ಅವರ ಎಲ್ಲ ಮಹತ್ವದ ವಿಷಯಗಳನ್ನೂ ಒಂದು ಕಡೆ ಆಡಿಯೊ ರೂಪದಲ್ಲಿ ಸಂಗ್ರಹಿಸುವ ಆಕಾಂಕ್ಷೆ ಇದೆ.

ಇತಿಹಾಸದ ಬಗ್ಗೆ, ಇತಿಹಾಸದಲ್ಲಿನ ವ್ಯಕ್ತಿ, ಸಂಗತಿಗಳ ಬಗ್ಗೆ ತಪ್ಪು ವ್ಯಾಖ್ಯಾನಗಳು, ಸುಳ್ಳು ಆಪಾದನೆಗಳೇ ಮೇಳೈಸುತ್ತಿರುವ ಕಾಲದಲ್ಲಿ ಬಾಬಾಸಾಹೇಬರನ್ನು ಅವರ ವಿಚಾರಗಳ ಮೂಲಕವೇ ಜನರಿಗೆ ಹತ್ತಿರವಾಗಿಸುತ್ತಿರುವ ಈ ಪ್ರಯತ್ನ ಒಂದು ಒಳ್ಳೆಯ ಪ್ರಯತ್ನವಷ್ಟೇ ಅಲ್ಲ, ಅನುಕರಣೀಯ ಮಾದರಿಯೂ ಹೌದು.

ಈ ಕೊಂಡಿ ಬಳಸಿ 'ಅಂಬೇಡ್ಕರ್ ಓದು' ಸರಣಿಯನ್ನು ನೀವು ಕೇಳಬಹುದು: **https://youtu.be/KgAf77t9fOI**

ಪ್ರತಿಕ್ರಿಯಿಸಿ: **feedback@sudha.co.in**

